**ಒ.ಎಸ್.ನಂಬ್ರ: 68/2024 ಪಿ .ಡಬ್ಲ್ಯೂ : 1**

ದಿನಾಂಕ: 30-05-2024 ರಂದು ಸಾಕ್ಷಿಯನ್ನು ಪುನ: ಕರೆಸಿ ಪ್ರಮಾಣೀಕರಿಸಲಾಯಿತು

**ಪಾಟಿ ಸವಾಲು: 4 ನೇಪ್ರತಿವಾದಿ ಪರ ಶ್ರೀ. ಸಿ.ಎಸ್.ಹೆಚ್ ವಕೀಲರಿಂದ**

1. ದಾವೆಯ ಬಗ್ಗೆ ನನಗೆ ಸಂಪೂರ್ಣ ಮಾಹಿತಿ ಇರುತ್ತದೆ ಎಂದರೆ ಸರಿ. ಈ ದಾವೆಯ ದಾಖಲೆಯ ಬಗ್ಗೆ ವಕೀಲರಿಗೆ ಸಂಪೂರ್ಣ ಮಾಹಿತಿಯನ್ನು ನಾನೇ ಕೊಟ್ಟಿರುತ್ತೇನೆ . ಈ ದಾವೆಯ ದಾವಾಪತ್ರ ಹಾಗೂ ಮುಖ್ಯವಿಚಾರಣೆಯ ಪ್ರಮಾಣ ಪತ್ರ ತಯಾರಿಸಲು ವಕೀಲರಿಗೆ ನಾನೇ ಮಾಹಿತಿ ಕೊಟ್ಟಿರುತ್ತೇನೆ. ವಾದಕಾರಣ 25 ರಿಂದ 30 ವರ್ಷಗಳಾಗಿರುತ್ತದೆ. ಸಾಕ್ಷಿ ಪುನ: 2013 ರಲ್ಲಿ ವ್ಯಾಜ್ಯ ಕಾರಣ ಉಂಟಾಗಿರುತ್ತದೆ ಎಂದು ನುಡಿದಿರುತ್ತಾರೆ . 2010 ರಲ್ಲಿ ಪಟ್ಟಣ ಪಂಚಾಯತಿಗೆ ಮಾಹಿತಿ ಹಕ್ಕಿನ ಅಡಿ ಒಂದು ಅರ್ಜಿ ಸಲ್ಲಿಸಿರುತ್ತೇನೆ ಎಂದರೆ ಸರಿ. ಆ ಅರ್ಜಿ ಈ ಪ್ರಕರಣ ವಿವಾದಿತ ರಸ್ತೆಗೆ ಸಂಬಂಧಿಸಿರುತ್ತದೆ ಎಂದರೆ ಸರಿ . ನಿಶಾನೆ ಪಿ 2 ಮತ್ತು 3 ರ ರಂತೆ ಪಟ್ಟಣ ಪಂಚಾಯತಿಗೆ ನಾನು ಮತ್ತು ನನ್ನ ತಾಯಿ ದೂರು ಕೊಟ್ಟಿರುತ್ತೇವೆ ಎಂದರೆ ಸರಿ .

2. ನಾನು ಕೊಟ್ಟಂತ ದೂರಿನಲ್ಲಿ ಪ್ರತಿವಾದಿಗಳ ವಿರುದ್ದ ಆರೋಪ ಇರುವುದಿಲ್ಲ ಎಂದರೆ ಸರಿಯಲ್ಲ ಸಾಕ್ಷಿ ಅವರು ಇದ್ದರು ಎಂದು ನುಡಿದಿರುತ್ತಾರೆ. ನಾನು ದೂರನಲ್ಲಿ ಸುಳ್ಳು ಬರೆದಿದ್ದೇನೆ ಎಂದರೆ ಸರಿಯಲ್ಲ . ವಾದಪತ್ರ ದ ಅನುಸೂಚಿ ಎ ಸ್ವತ್ತು ನನ್ನ ತಂದೆಯಿಂದ ನನಗೆ ಬಂದಿರುತ್ತದೆ . ನನ್ನ ತಂದೆಗೆ ಸದರಿ ಸ್ವತ್ತು ಭೂ ನ್ಯಾಯಮಂಡಳಿಯಿಂದ ಡಿಕ್ಲರೇಶನ್ ಮುಖಾಂತರ ಬಂದಿರುತ್ತದೆ . ನಾನು ನನ್ನ ಮುಖ್ಯವಿಚಾರಣೆ ಪ್ರಮಾಣ ಪತ್ರದಲ್ಲಿ ದಾವಾ ಆ ಅನುಸೂಚಿ ಸ್ವತ್ತು ಖದಿಂ ಭೂಮಿ ಅಂತ ಬರೆಯಿಸಿರುವುದು ಸರಿ ಇರುತ್ತದೆ. ಖದಿಂ ಜಮೀನು ಎಂದರೆ ಅನಾದಿ ಕಾಲದಿಂದ ಬಂದ ಜಮೀನು ಆಗಿರುತ್ತದೆ ನಮಗೆ ಬಂದಿರುವುದು ಭೂ ನ್ಯಾಯಮಂಡಳಿಯಿಂದ ಮಂಜೂರು ಆಗಿರುವ ಸ್ವತ್ತು ಎಂದರೆ ನಮ್ಮ ತಂದೆಯೂ ಸಹ ಖದಿಂ ಭೂಮಿ ಅಂತ ಹೇಳುತ್ತಿದ್ದರು ಎಂದು ನುಡಿದಿರುತ್ತಾರೆ .

3. ನಿಶಾನೆ ಪಿ10 ಸರ್ಕಾರಿ ಜಮೀನಿನ ಪಹಣಿ ಪತ್ರ ಎಂದರೆ ಸಾಕ್ಷಿಯು ಸರಿ. ಸಾಕ್ಷಿ ನಮ್ಮ ಗುಂಪಿಗೆ ಸಂಬಂಧಿಸಿದ ಸರ್ವೇ ನಂಬರ್ ಎಂದು ನುಡಿದಿರುತ್ತಾರೆ. ನಿಶಾನೆ ಪಿ2 ಮತ್ತು 3 ರಲ್ಲಿ ಹೆಸರಿಸಿರುವವರ ವಿರುದ್ದ ಏಕೆ ದೂರು ಕೊಟ್ಟಿರುವುದಿಲ್ಲ ಎಂದರೆ ಸಾಕ್ಷಿ ಅವರು ನನ್ನ ವಿರುದ್ದ ದೂರು ಸಲ್ಲಿಸಿರುತ್ತಾರೆ ಎಂದು ನುಡಿದಿರುತ್ತಾರೆ. ನಾನು ದಾವಾ ಸ್ವತ್ತಿನ ಭೂಮಿಯನ್ನು ಮಂಜೂರು ಮಾಡಬೇಕು ಅಂತ ಸರ್ಕಾರಕ್ಕೆ ಅಕ್ರಮ ಸಕ್ರಮದ ಅಡಿ ಅರ್ಜಿ

ಸಲ್ಲಿಸಿರುತ್ತೇನೆ . ಸದರಿ ಅರ್ಜಿ ಇನ್ನೂ ಇತ್ಯರ್ಥಕ್ಕೆ ಇರುತ್ತದೆ . ನಾನು ಭೂ ಮಂಜೂರಾತಿಗಾಗಿ ಸಲ್ಲಿಸಿದ ಅರ್ಜಿಯ ವಿರುದ್ದವಾಗಿ ನರಸಿಂಹ ಮಧ್ಯಸ್ಥ ಹಾಗೂ ಜನಾರ್ಧನ ಮಧ್ಯಸ್ಥ ರವರುಗಳು ಇದೇ ನ್ಯಾಯಲಯದಲ್ಲಿ ದಾವಾ ಸಂಖ್ಯೆ 356/1995 ರಂತೆ ಶಾಶ್ವತ ನಿರ್ಭಂಧಕಾಜ್ಞೆ ಕೋರಿ ಸಲ್ಲಿಸಿರುತ್ತಾರೆ ಎಂದರೆ ಸಾಕ್ಷಿ ಅದು ಬೇರೆ ಜಾಗ ಎಂದು ನುಡಿದಿರುತ್ತಾರೆ .

4. ಈ ಪ್ರಕರಣದ ಆಸ್ತಿ ಹಾಗೂ ಅಸಲು ದಾವಾ ಸಂಖ್ಯೆ 356/1995 ರ ಆಸ್ತಿ ಬೇರೆ ಎಂದು ತೋರಿಸಲು ದಾಖಲೆಗಳನ್ನು ಹಾಜರುಪಡಿಸಿದ್ದಿರಾ ಎಂದರೆ ಸಾಕ್ಷಿ ದಾವಾ ಸಂಖ್ಯೆ 356/1995 ರ ಆಸ್ತಿ ನಮ್ಮ ಸ್ವಾಧೀನತೆಯ ಉತ್ತರಕ್ಕೆ ಇರುತ್ತದೆ ಎಂದು ನುಡಿಯುತ್ತಾರೆ . 2015 ರಲ್ಲಿ ಕೃಷಿ ಭೂಮಿಯಿನ್ನು ಖರೀದಿಸಿದ ರಿಯಲ್ ಎಸ್ಟೇಟ್ ವ್ಯಕ್ತಿಗಳಲ್ಲಿ ಹೊರಗಿನವರು ಇರುತ್ತಾರೆ ಹಾಗೂ ಒಳಗಿನವರು ಇರುತ್ತಾರೆ ಎಂದು ನುಡಿಯುತ್ತಾರೆ . ಶಂಕರ್ ನಾರಾಯಣ ಶೆಟ್ಟಿಗಾರ್ ರವರು ಹೊರಗಿನವರಿರುತ್ತಾರೆ . ಅಲ್ಲಿ ಖರೀದಿ ಮಾಡಿದವರೆಲ್ಲಾ ರಿಯಲ್ ಎಸ್ಟೇಟ್ ವ್ಯಕ್ತಿಗಳು ಎಂದರೆ ಸಾಕ್ಷಿ ಅಲ್ಲಿ ಕೇವಲ ಇಬ್ಬರು ವ್ಯಕ್ತಿಗಳು ಮಾತ್ರ ಖರೀದಿ ಮಾಡಿರುತ್ತಾರೆ ಎಂದು ನುಡಿಯುತ್ತಾರೆ . ಖರೀದಿ ಮಾಡಿದವರ ವಿರುದ್ದ ವೈಶಮ್ಯ ಇರುವುದರಿಂದ ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ .

5. ದಾವಾ ಸ್ವತ್ತಿಗೆ ಸಂಬಂಧಪಟ್ಟಂತೆ 2010 ರ ಹಿಂದಿನಿಂದಲೂ ವ್ಯಾಜ್ಯ ಇದ್ದರೂ 2015 ರಲ್ಲಿ ಏಕೆ ದಾವೆ ಸಲ್ಲಿಸಿರುತ್ತಾರೆ ಎಂದರೆ ಸಾಕ್ಷಿ ಸ್ವಾಧೀನದ ಸ್ಥಳದಲ್ಲಿ ರಸ್ತೆ ಅಥವಾ ದಾರಿ ಇರುವುದಿಲ್ಲ ಎಂದು ನುಡಿಯುತ್ತಾರೆ . ಸಾರ್ವಜನಿಕರಿಗೆ ತೊಂದರೆ ಕೊಡುವ ವಿಚಾರವಾಗಿ ನ್ಯಾಯಲಯಕ್ಕೆ ಸುಳ್ಳು ಹೇಳಿ ಆದೇಶ ಪಡೆದುಕೊಂಡಿರುತ್ತೇನೆ ಎಂದರೆ ಸರಿಯಲ್ಲ. ಈ ದಾವೆಯನ್ನು ನಾನು 2015 ರಲ್ಲಿ ಹಾಕಿರುತ್ತೇನೆ ಎಂದರೆ ಸರಿ . 2015 ರಲ್ಲಿ ಏಕಪಕ್ಷೀಯ ಆದೇಶ ಪಡೆದುಕೊಂಡು 2021 ರವರೆಗೆ ಯಾವುದೇ ವಿಚಾರಣೆ ಮಾಡದೇ ಸಾರ್ವಜನಿಕರಿಗೆ ತೊಂದರೆ ಕೊಟ್ಟಿರುತ್ತೇನೆ ಎಂದರೆ ಸರಿಯಲ್ಲ . 2021 ರಲ್ಲಿ ಶಾಶ್ವತ ನಿರ್ಭಂಧಕಾಜ್ಞೆಯನ್ನು ತೆರವುಗೊಳಿಸಿ ಈ ನ್ಯಾಯಲಯ ನನ್ನ ವಿರುದ್ದ ಆದೇಶ ಹೊರಡಿಸಿರುತ್ತದೆ ಎಂದರೆ ಸಾಕ್ಷಿಯು ಆ ಆದೇಶದ ವಿರುದ್ದ ಮೇಲ್ಮನವಿ ಸಲ್ಲಿಸಿರುತ್ತೇನೆ ಎಂದು ನುಡಿಯತ್ತಾರೆ. ಮೇಲ್ಮನವಿ ವಜಾವಾಗಿರುತ್ತದೆ ಎಂದರೆ ಸಾಕ್ಷಿ ಉಚ್ಚ ನ್ಯಾಯಲಯದಲ್ಲಿ ನಡೆಯುತ್ತಿರುತ್ತದೆ ಎಂದು ನುಡಿಯುತ್ತಾರೆ

6. ಉಚ್ಚ ನ್ಯಾಯಲಯದಲ್ಲಿ ಯಾವುದೇ ಮೇಲ್ಮನವಿ ಇರುವುದಿಲ್ಲ ಎಂದರೆ ಸಾಕ್ಷಿ ತನಿಖೆ ನಡೆಯುತ್ತಿರುತ್ತದೆ ಎಂದು ನುಡಿಯುತ್ತಾರೆ . ಸದರಿ ದಾಖಲೆಯನ್ನು ಹಾಜರುಪಡಿಸುತ್ತೀರಾ

ಎಂದರೆ ಸಾಕ್ಷಿಯು ಕಾಲಾವಕಾಶ ಬೇಕು ಎಂದು ನುಡಿಯುತ್ತಾರೆ . ಸದರಿ ದಾಖಲೆಯನ್ನು ಈ ನ್ಯಾಯಲಯದಲ್ಲಿ ಏಕೆ ಹಾಜರುಪಡಿಸಿರುವುದಿಲ್ಲ ಎಂದರೆ ಸಾಕ್ಷಿ ಸುಮ್ಮಸಿರುತ್ತಾರೆ . ಸಾರ್ವಜನಿಕರಿಗೆ ತೊಂದರೆ ಕೊಡುವ ಉದ್ದೇಶದಿಂದ ಸುಳ್ಳು ದಾವೆ ಸಲ್ಲಿಸಿರುತ್ತೇನೆ ಎಂದರೆ ಸರಿಯಲ್ಲ. ನಿರ್ಭಂಧಕಾಜ್ಞೆ ನನ್ನ ವಿರುದ್ದವಾಗಿ ಇದ್ದರೂ ಸಹ ಇಂದೂ ಸಹ ನಾನು ಸಾರ್ವಜನಿಕರಿಗೆ ತೊಂದರೆ ಕೊಡುತ್ತಿರುತ್ತೇನೆ ಎಂದರೆ ಸರಿಯಲ್ಲ. ನನಗೆ ಕೆಲವೊಂದು ವ್ಯಕ್ತಿಗಳ ವಿರುದ್ದ ವೈಶಮ್ಯ ಇರುವುದರಿಂದ ಈ ವ್ಯಕ್ತಿಗಳ ವಿರುದ್ದ ಪ್ರಕರಣ ಸಲ್ಲಿಸಿರತ್ತೀರಾ ಎಂದರೆ ಸಾಕ್ಷಿಯು ಆ ವ್ಯಕ್ತಿಗಳು ಈ ಪ್ರತಿವಾದಿಗಳೊಂದಿಗೆ ಸೇರಿ ತೊಂದರೆ ಕೊಡುತ್ತಿರುತ್ತಾರೆ ಎಂದು ನುಡಿಯುತ್ತಾರೆ .

7. ನಾನು ಸಲ್ಲಿಸಿರುವ ಭೂ ಮಂಜುರಾತಿ ಅರ್ಜಿ ಸರ್ಕಾರದಲ್ಲಿ ಇತ್ಯರ್ಥ್ಯಕ್ಕೆ ಇರುವುದರಿಂದ ನಾನು ಈ ಪ್ರಕರಣ ಸಲ್ಲಿಸಲು ಬರುವುದಿಲ್ಲ ಎಂದರೆ ಸಾಕ್ಷಿಯು ನಾನು ಯಾರಿಗೂ ತೊಂದರೆಕೊಟ್ಟಿರುವುದಿಲ್ಲ ಅವರು ಖರೀದಿ ಮಾಡಿರುವ ಜಾಗಕ್ಕೆ ಯಾವುದೇ ರಸ್ತೆ ಇರುವುದಿಲ್ಲ ಎಂದು ನುಡಿಯುತ್ತಾರೆ. ನನಗೆ ಬೇರೆ ಪ್ರಾಧಿಕಾರದಲ್ಲಿ ಪ್ರಕರಣ ಇತ್ಯರ್ಥ್ಯಪಡಿಸಿಕೊಳ್ಳಲು ಅವಕಾಶ ಇದ್ದರೂ ಸಹ ಈ ನ್ಯಾಯಲಯದಲ್ಲಿ ಈ ಪ್ರಕರಣ ಸಲ್ಲಿಸಲು ಅವಕಾಶ ಇಲ್ಲ ಎಂದರೆ ಸರಿಯಲ್ಲ .

**ಪಾಟಿ ಸವಾಲುಃ 1 ರಿಂದ 3 ನೇ ಪ್ರತಿವಾದಿ ಪರ ಸಹಾಯಕ ಸರ್ಕಾರಿ ಅಭಿಯೋಜಕರಿಂದ**

1. ನಾನು ದಾವೆಯನ್ನು ಗ್ರಾಮ ಲೆಕ್ಕಾಧಿಕಾರಿ, ಕಂದಾಯ ಅಧಿಕಾರಿ, ಪಟ್ಟಣ ಪಂಚಾಯತಿ ಸಾಲಿಗ್ರಾಮ ಮತ್ತು ಸರ್ಕಾರದ ವಿರುದ್ದ ಸಲ್ಲಿಸಿರುತ್ತೇನೆ . ಎದುರರುದಾರರ ವಿರುದ್ದ ನಮ್ಮ ಸ್ವಾಧೀನದ ಸ್ಥಳ ಕುಮ್ಕಿ ಹಕ್ಕನ್ನು ನಮಗೆ ಕೊಡಿಸಬೇಕು ಅಂತ ಕೇಳಿರುತ್ತೇನೆ . ಸರ್ಕಾರವನ್ನು ಪಕ್ಷಗಾರರನ್ನಾಗಿ ಮಾಡುವ ಪೂರ್ವದಲ್ಲಿ ನೋಟಿಸು ಕೊಟ್ಟಿರುತ್ತೇನೆ . 2013 ಮತ್ತು 2015 ರಲ್ಲಿ ನೋಟಿಸು ಕೊಟ್ಟಿರುತ್ತೇನೆ . ದಾವೆ 2015 ರಲ್ಲಿ ಸಲ್ಲಿಸಿರುತ್ತೇನೆ . ಈ 2 ನೋಟಿಸಿನ ಪ್ರತಿಗಳನ್ನು ದಾವೆಯಲ್ಲಿ ಸಲ್ಲಿಸಿರುತ್ತೇನೆ. ಸಾಕ್ಷಿಗೆ ಈಗ ನಿಶಾನೆಪಿ ದಾಖಲೆಗಳನ್ನು ಕೊಟ್ಟು ನೋಟಿಸನ್ನು ತೋರಿಸಲು ಕೇಳಿದ್ದು ಸಾಕ್ಷಿ ದಾಖಲೆಗಳನ್ನು ನೋಡಿ ನಿಶಾನೆ ಪಿ 2 ಮತ್ತು 3 ಇವೆ ನೋಟಿಸುಗಳು ಆಗಿರುತ್ತದೆ ಎಂದು ನುಡಿಯುತ್ತಾರೆ .

2. ದಾವಾ ಅನುಸೂಚಿ ಎ ಮತ್ತು ಬಿ ಯಲ್ಲಿ ತೋರಿಸಿರುವ ಆಸ್ತಿಗಳಿಗೆ ಸಂಬಂದಪ್ಪ ಯಾವ ಪ್ರತಿವಾದಿಯ ವಿರುದ್ದ ಯಾವ ಆಸ್ತಿಗೆ ಸಂಬಂಧಪಟ್ಟಂತೆ ದಾವೆ ಸಲ್ಲಿಸಿರುತ್ತೇನೆ ಅಂತ ಹೇಳಲು ಬರುವುದಿಲ್ಲ . ನಾನು ದಾವಾ ಸ್ವತ್ತಿಗೆ ಸಂಬಂಧಪಟ್ಟಂತೆ ಅಕ್ರಮ ಸಕ್ರಮದಡಿ ಕೊಟ್ಟಂತಹ ಅರ್ಜಿ ಇತ್ಯರ್ಥಕ್ಕೆ ಇರುತ್ತದೆ ಎಂದರೆ ಸರಿ . ನನಗೆ 3 ನೇ ಪ್ರತಿವಾದಿಯಿಂದ ಯಾವುದೇ ತೊಂದರೆ ಯಾಗದೇ ಇದ್ದರೂ ಸಹ ಸುಳ್ಳು ಪ್ರಕರಣ ಸಲ್ಲಿಸಿರುತ್ತೇನೆ ಎಂದರೆ

ಸರಿಯಲ್ಲ. ಸಾಕ್ಷಿ ರಸ್ತೆ ಮಾಡಲು ಅವರು ಪ್ರಯತ್ನಿಸಿರುತ್ತಾರೆ ಎಂದು ನುಡಿಯುತ್ತಾರೆ. ಅನುಸೂಚಿ ಎ ಖಾದಿಂ ಸ್ವತ್ತು ನನ್ನ ಆಸ್ತಿ ಎಂದು ತೋರಿಸಲು ಪಹಣಿಯನ್ನು ಹಾಜರುಪಡಿಸಿರುತ್ತೇನೆ. ಪ್ರತಿವಾದಿಗಳು ತೊಂದರೆಕೊಟ್ಟ ಬಗ್ಗೆ ಅವರ ಮೇಲಾಧಿಕಾರಿಗಳಾದ ಡಿಸಿ ರವರಿಗೆ ದೂರು ಕೊಟ್ಟಿರುತ್ತೇನೆ . ಸಾಕ್ಷಿ ನಿಶಾನೆ ಪಿ 3 ನ್ನು ಮೇಲಾಧಿಕಾರಿಗಳಿಗೆ ಕೊಟ್ಟ ದೂರಾಗಿರುತ್ತದೆ ಎಂದು ನುಡಿಯುತ್ತಾರೆ . 1 ರಿಂದ 3 ನೇ ಪ್ರತಿವಾದಿಗಳಿಂದ ಯಾವುದೇ ತೊಂದರೆ ಆಗದೇ ಇದ್ದುದರಿಂದ ಅವರ ಮೇಲಾಧಿಕಾರಿಗಳಿಗೆ ದೂರು ಸಲ್ಲಿಸುವ ಸಂಧರ್ಭವೇ ಬಂದಿರುವುದಿಲ್ಲ ಎಂದರೆ ಸರಿಯಲ್ಲ . 1 ರಿಂದ 3 ನೇ ಪ್ರತಿವಾದಿಗಳಿಂದ ಯಾವುದೇ ತೊಂದರೆ ಆಗದೇ ಇದ್ದರೂ ಸಹ ಅನಾವಶ್ಯಕವಾಗಿ ಅವರನ್ನು ಈ ಪ್ರಕರಣದಲ್ಲಿ ಪಕ್ಷಗಾರರನ್ನಾಗಿ ಮಾಡಿದ್ದೀರಾ ಎಂದರೆ ಸರಿಯಲ್ಲ. ನನ್ನ ಕಾರ್ಯಸಿದ್ದಿ ಮಾಡಿಕೊಳ್ಳಲು ಅವರ ಮೇಲೆ ಒತ್ತಡ ಹೇರಿ ಅವರ ವಿರುದ್ದ ದಾವೆ ಸಲ್ಲಿಸಿರುತ್ತೇನೆ ಎಂದರೆ ಸರಿಯಲ್ಲ. ದಾವೆಯಲ್ಲಿ 1 ರಿಂದ 3 ನೇ ಪ್ರತಿವಾದಿಗಳ ವಿರುದ್ದ ಸುಳ್ಳು ಮಜುಕೂರ್ ನ್ನು ಸೇರಿಸಿ ಸುಳ್ಳು ದಾವೆಯನ್ನು ಸಲ್ಲಿಸಿರುತ್ತೇನೆ ಎಂದರೆ ಸರಿಯಲ್ಲ .

**ಮರುವಿಚಾರಣೆ : ಇಲ್ಲ**

ಓ.ಹೇ.ಕೇ.ಸ.ಇದೆ

ನನ್ನ ಹೇಳಿಕೆ ಮೇರೆಗೆ ಬೆರಳಚ್ಚು ಮಾಡಲಾಗಿದೆ

**ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು**
**ಜೆ.ಎಂ.ಎಫ್.ಸಿ., ಕುಂದಾಪುರ .**